ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 74/2023**

ಪ್ರ.ವ.ಬೋ.ತಾಃ 19-02-2026

ಚಾಸಾಃ 7 ಫ್ರಾಸಾಃ 7

| | |
|---|---|
| ಸಾಕ್ಷಿಯ ಹೆಸರು | ಯೋಗೀಶ್.ಎನ್. |
| ತಂದೆ/ಗಂಡನ ಹೆಸರು | ಲೇ. ನರಸೀಯಪ್ಪ |
| ವಯಸ್ಸು | 40 ವರ್ಷ |
| ವೃತ್ತಿ | ಗ್ರಾಮ ಪಂಚಾಯಿತಿ ಸದಸ್ಯರು, ಬ್ಯಾಲ್ಯ |
| ವಾಸ | ಬ್ಯಾಲ್ಯ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು ಬ್ಯಾಲ್ಯ ಗ್ರಾಮ ಪಂಚಾಯಿತಿಯ ಸದಸ್ಯನಾಗಿರುತ್ತೇನೆ. ನನಗೆ ಚಾಸಾ.1 ರವರ ಪರಿಚಯ ಇದೆ. 1 ನೇ ಆರೋಪಿ ಬ್ಯಾಲ್ಯ ಗ್ರಾಮ ಪಂಚಾಯಿತಿಯ ಬೀಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು, 2 ನೇ ಆರೋಪಿ ಆ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾಗಿದ್ದರು. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿಃ 03.08.2021 ರಂದು ಜೂನ್ 2020 ರಿಂದ ಜನವರಿ 2021 ರವರೆಗೆ ಒಟ್ಟು 8 ತಿಂಗಳ ವೇತನವನ್ನು ಸಿಬ್ಬಂದಿ ವೇತನದಿಂದ ರೂ.1,12,920/– ನ್ನು ಮಂಜೂರು ಮಾಡಿಕೊಂಡು 2 ನೇ ಆರೋಪಿಗೆ 1 ನೇ ಆರೋಪಿ 2021 ನೇ ಸಾಲಿನ ಜೂನ್ ಮತ್ತು ಜುಲೈ ಮಾಹೆಯ ವೇತನ ಮಂಜೂರಾಗಿರುವ ಬಗ್ಗೆ ಗೊತ್ತಿದ್ದರೂ ಸಹ ಪುನಃ 2021 ನೇ ಜೂನ್ ಮತ್ತು ಜುಲೈ ಮಾಹೆಯ ವೇತನವಾಗಿ ರೂ.22,396/– ನ್ನು ಮತ್ತು ಹೆಚ್ಚುವರಿಯಾಗಿ ರೂ.417/– ಒಟ್ಟು ರೂ.27,813/– ನ್ನು ಹೆಚ್ಚಾಗಿ ಡ್ರಾ ಮಾಡಿಕೊಂಡು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ.13 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ವಕೀಲರಿಂದಃ**– <u>ಏನೂ ಇಲ್ಲ</u>.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ